ದಿನಾಂಕಃ 26-12-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಆರ್.ಕೆ ವಕೀಲರಿಂದ.**

ನಂದವಾಡಗಿ ಮತ್ತು ಬ್ಯಾಗರಹಳ್ಳ 5 ಕಿ.ಮೀ ಅಂತರವಿದೆ. ನಾನು ಬೆಳಗ್ಗೆ 12.00 ಗಂಟೆಗೆ ಶವ ನೋಡಲು ಹೋಗಿದ್ದೆ ಅಲ್ಲಿ ಪೊಲೀಸರು ಪಂಚನಾಮೆಗೆ ಕರೆದರು. ಶವ ತೆಗೆದುಕೊಂಡು ಹೋದಾಗ 2.30 ರಿಂದ 3.00 ಗಂಟೆಯಾಗಿತ್ತು. ಶವದ ಜೊತೆಗೆ ನಾವು ಹುನಗುಂದಕ್ಕೆ ಹೋಗಲಿಲ್ಲ ಇಳಕಲ್‌ಗೆ ಹೋದೆವು. ಎರಡೂ ಪಂಚನಾಮೆಗಳಲ್ಲಿ ಬರೆದ ವಿಷಯ ನಮಗೆ ಓದಿ ಹೇಳಿಲ್ಲ ಹಾಗೂ ಪೊಲೀಸಠಾಣೆಗೆಯಲ್ಲಿ ಸಹಿ ಪಡೆದಿದ್ದಾರೆ. ಶವದ ಹತ್ತಿರ ನಿಂತಾಗ ಪಂಚನಾಮೆ ಮಾಡಿ ಪೋಟೋ ತೆಗೆದಿದ್ದಾರೆ. ಶವದ ಮುಂದೆ ಪಂಚನಾಮೆ ಮಾಡುವಾಗ ಏಕೆ ಮಾಡಿದ್ದೇವೆ ಅಂತಾ ಹೇಳಿದರು. ಸ್ಥಳದಲ್ಲಿ ಬಾಡಿ ಮತ್ತು ಅವನ ವಸ್ತುಗಳು ಮತ್ತು ಬೈಕ ಬಿದ್ದಿದ್ದವು.

ವಸ್ತುಗಳು ಎಂದರೆ ಫೋನ್, ಬೈಕ, ಬಾಡಿ ಹಾಗೂ ಅವನ ಹೆಗಲಿಗೆ ಹಾಕಿದ ಟವೆಲ್ ಬಿಟ್ಟು ಬೇರೆ ನೋಡಿಲ್ಲ ಎಂದು ಸೂಚಿಸುವುದು ನಿಜ. ಸ್ಥಳದಲ್ಲಿ ಯಾವುದೇ ಫೋನ್, ಬೈಕ, ಬಾಡಿ ಹಾಗೂ ಟವೆಲ್ ನೋಡಿಲ್ಲ, ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಎರಡು ಪಂಚನಾಮೆಗಳಲ್ಲಿ ಬರೆದ ವಿಷಯ ಗೊತ್ತಿಲ್ಲದಿದ್ದರೂ ಸಹಿತ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪಂಚನಾಮೆ ಮಾಡಿದ ನಂತರ ಸಹಿ ಮಾಡಿದ್ದೇನೆ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

26-12-2025
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.

**S.C. 53/2024.**

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.**

**<u>ಸತ್ರ ಮೊಕದ್ದಮೆ ಸಂಖ್ಯೆ: 53/2024.</u>**

| | | | |
|---|---|---|---|
| ಹೆಸರು | : | ಬಸವರಾಜ ಕೊಪ್ಪದ | ಫ್ರಾಸಾ-05 |
| ತಂದೆಯ ಹೆಸರು | : | ಚಂದ್ರಶೇಖರ | ಚಾಸಾ-05 |
| ವಯಸ್ಸು | : | 28 ವರ್ಷ | |
| ಉದ್ಯೋಗ | : | ನೇಕಾರಿಕೆ | |
| ವಾಸಸ್ಥಳ | : | ಇಳಕಲ್ | |

ದಿನಾಂಕಃ 26-12-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.</u>**

ಆರೋಪಿತರು ಹಾಗೂ ಚಾಸಾ-4 ಪರಿಚಯವಿಲ್ಲ. ಈಗ ನಿಪಿ-6,7 ನೋಡುತ್ತಿದ್ದು ಅವುಗಳ ಮೇಲಿನ ಸಹಿಗಳನ್ನು ನನ್ನದೇ ಇದ್ದು ಅವುಗಳನ್ನು ನಿಪಿ-6(ಬಿ) ಮತ್ತು 7(ಬಿ) ಅಂತಾ ಗುರುತಿಸಲಾಯಿತು. ಪೋಲಿಸರು ಠಾಣೆಯಲ್ಲಿ 2 ಪೋಟೋಗಳನ್ನು ತೆಗೆದಿದ್ದು ಅವುಗಳನ್ನು ಈಗಾಗಲೇ ನಿಪಿ-9 ಮತ್ತು 10 ಅಂತಾ ಗುರುತಿಸಲಾಯಿತು. ಅವುಗಳನ್ನು ಯಾವ ವಿಷಯಕ್ಕೆ ತೆಗೆದಿದ್ದಾರೆ ನನಗೆ ಗೊತ್ತಿಲ್ಲ. ಸದರಿ ಸಹಿಗಳನ್ನು ಯಾವ ದಿನಾಂಕ ಪಡೆದಿದ್ದಾರೆ ನನಗೆ ಗೊತ್ತಿಲ್ಲ. ಆದರೆ 3 ವರ್ಷಗಳ ಹಿಂದೆ ಠಾಣೆಯಲ್ಲಿ ಪಡೆದಿದ್ದಾರೆ. ಪಂಚನಾಮೆಗಳಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**<u>ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.</u>**

ದಿನಾಂಕಃ 01.05.2024 ರಂದು ಬೆಳಗ್ಗೆ 10.30 ರಿಂದ 11.00 ಗಂಟೆವರೆಗೆ ಇಳಕಲ್ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಮೃತ ಬಸವರಾಜನ ಮೈಮೇಲಿನ ರಕ್ತ ಹತ್ತಿದ ಬಿಳಿ ಮತ್ತು ಕ್ರೀಂ ಬಣ್ಣದ ಚೌಕಡಿ ಫುಲ್ ಶರ್ಟು,

ರಕ್ತ ಹತ್ತಿದ ಬಿಳಿ ಬಣ್ಣದ ಹಾಪ ಬನಿಯನ್, ಡಾಲರ ಕಂಪನಿಯ ನೀಲಿ ಬಣ್ಣದ ಅಂಡರವೇರ, ರಕ್ತ ಹತ್ತಿದ ಬಿಳಿ ಬಣ್ಣದ ಲುಂಗಿಗಳನ್ನು ನಿಪಿ-6 ರಡಿ ಅಮಾನತುಪಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

ದಿನಾಂಕಃ 02.05.2024 ರಂದು ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಪ್ರಶಾಂತ ಭಜಂತ್ರಿ ಇವನು ಹಾಜರುಪಡಿಸಿದ ರೂ.100 ಮತ್ತು 200 ರ ಮುಖಬೆಲೆಯ ತಲಾ 6 ನೋಟುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಮಧ್ಯಾಹ್ನ 1.30 ರಿಂದ 2.00 ಗಂಟೆವರೆಗೆ ಇಳಕಲ್ ಗ್ರಾಮೀಣ ಪೊಲೀಸ ಠಾಣೆಯಲ್ಲಿ ನಿಪಿ-7 ರಡಿ ಅಮಾನತುಪಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಆ ಕುರಿತು ನಿಪಿ-9,10 ರಂತೆ ಪೋಟೋ ತೆಗೆದಿದ್ದಾರೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

26-12-2025
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.

S.C. 53/2024.

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.**

**<u>ಸತ್ರ ಮೊಕದ್ದಮೆ ಸಂಖ್ಯೆ: 53/2024.</u>**

| | | | |
|---|---|---|---|
| ಹೆಸರು | : | ಮುತ್ತಪ್ಪ ಬೀಳಗಿ | ಫ್ರಾಸಾ-04 |
| ತಂದೆಯ ಹೆಸರು | : | ಗುರಪ್ಪ | ಚಾಸಾ-04 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | ಆಟೋ ಚಾಲಕ | |
| ವಾಸಸ್ಥಳ | : | ಇಳಕಲ್ | |

ದಿನಾಂಕಃ 26-12-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.</u>**

ಆರೋಪಿತರು ಹಾಗೂ ಚಾಸಾ-5 ಪರಿಚಯವಿಲ್ಲ. ಈಗ ಮೂರು ದಾಖಲೆಗಳನ್ನು ನೋಡುತ್ತಿದ್ದು ಅವುಗಳ ಮೇಲಿನ ಸಹಿಗಳನ್ನು ನನ್ನದೇ ಇದ್ದು ಅವುಗಳನ್ನು ನಿಪಿ-6 ರಿಂದ 8 ಅಂತಾ, ಸಹಿಗಳನ್ನು ನಿಪಿ-6(ಎ) ರಿಂದ 8(ಎ) ಅಂತಾ ಗುರುತಿಸಲಾಯಿತು. ಪೋಲಿಸರು ಠಾಣೆಯಲ್ಲಿ 3 ಫೋಟೋಗಳನ್ನು ತೆಗೆದಿದ್ದು ಅವುಗಳನ್ನು ನಿಪಿ-9 ರಿಂದ 11 ಅಂತಾ ಗುರುತಿಸಲಾಯಿತು. ಅವುಗಳನ್ನು ಯಾವ ವಿಷಯಕ್ಕೆ ತೆಗೆದಿದ್ದಾರೆ ನನಗೆ ಗೊತ್ತಿಲ್ಲ. ಸದರಿ ಸಹಿಗಳನ್ನು ಯಾವ ದಿನಾಂಕ ಪಡೆದಿದ್ದಾರೆ ನನಗೆ ಗೊತ್ತಿಲ್ಲ. ಆದರೆ 3 ವರ್ಷಗಳ ಹಿಂದೆ ಠಾಣೆಯಲ್ಲಿ ಪಡೆದಿದ್ದಾರೆ. ಪಂಚನಾಮೆಗಳಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**<u>ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.</u>**

ದಿನಾಂಕಃ 01.05.2024 ರಂದು ಬೆಳಗ್ಗೆ 10.30 ರಿಂದ 11.00 ಗಂಟೆವರೆಗೆ ಇಳಕಲ್ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಮೃತ ಬಸವರಾಜನ ಮೈಮೇಲಿನ ರಕ್ತ ಹತ್ತಿದ ಬಿಳಿ ಮತ್ತು ಕ್ರೀಂ ಬಣ್ಣದ ಚೌಕಡಿ ಫುಲ್ ಶರ್ಟು,

ರಕ್ತ ಹತ್ತಿದ ಬಿಳಿ ಬಣ್ಣದ ಹಾಪ ಬನಿಯನ್, ಡಾಲರ ಕಂಪನಿಯ ನೀಲಿ ಬಣ್ಣದ ಅಂಡರವೇರ, ರಕ್ತ ಹತ್ತಿದ ಬಿಳಿ ಬಣ್ಣದ ಲುಂಗಿಗಳನ್ನು ನಿಪಿ-6 ರಡಿ ಅಮಾನತುಪಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

ದಿನಾಂಕಃ 02.05.2024 ರಂದು ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಪ್ರಶಾಂತ ಭಜಂತ್ರಿ ಇವನು ಹಾಜರುಪಡಿಸಿದ ರೂ.100 ಮತ್ತು 200 ರ ಮುಖಬೆಲೆಯ ತಲಾ 6 ನೋಟುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಮಧ್ಯಾಹ್ನ 1.30 ರಿಂದ 2.00 ಗಂಟೆವರೆಗೆ ಇಳಕಲ್ ಗ್ರಾಮೀಣ ಪೊಲೀಸ ಠಾಣೆಯಲ್ಲಿ ನಿಪಿ-7 ರಡಿ ಅಮಾನತುಪಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

ದಿನಾಂಕಃ 03.05.2024 ರಂದು ಬೆಳಗ್ಗೆ 11.30 ರಿಂದ 12.00 ಗಂಟೆವರೆಗೆ ಇಳಕಲ್ ಗ್ರಾಮೀಣ ಪೊಲೀಸ ಠಾಣೆಯಲ್ಲಿ ನನ್ನ ಹಾಗೂ ಚಾಸಾ-5 ರ ಸಮಕ್ಷಮ ಆರೋಪಿ-ಸುನೀಲ್ ಈತನು ನನ್ನ, ಚಾಸಾ-5 ಹಾಗೂ ಪೊಲೀಸರೊಂದಿಗೆ ನಂದವಾಡಗಿ ರಸ್ತೆಯ ಹಳ್ಳದ ಹತ್ತಿರ ತನ್ನ ಸೈಕಲ ನೀಲ್ಲಿಸಿ ಕಟ್ಟಿಗೆ ಬಡಿಗೆಯಿಂದ ತಲೆಗೆ ಹೊಡೆದ ಸ್ಥಳ ಅಂತಾ ತೋರಿಸಿದ್ದು ಅಲ್ಲಿ ಪಂಚನಾಮೆ ಜರುಗಿಸಿ ನಂತರ ಹಳ್ಳದಲ್ಲಿದ್ದ ನೀರಿನ ಹರಿ ತೋರಿಸಿ ಕೃತ್ಯಕ್ಕೆ ಉಪಯೋಗಿಸಿದ ಬಡಿಗೆಯನ್ನು ಒಗೆದು ಹೋಗಿದ್ದು ಅಂತಾ ತೋರಿಸಿದ್ದು ಸದರಿ ಹಳ್ಳದಲ್ಲಿ ಈಗ ನೀರು ಇರುವುದಿಲ್ಲ ಆದರೆ 5 ಫೂಟ್ ಆಳದಲ್ಲಿದ್ದು ಅಲ್ಲಿ 9.15 ರಿಂದ 9.45 ಗಂಟೆವರೆಗೆ ಪಂಚನಾಮೆ ಜರುಗಿಸಿ ನಂತರ ಸದರಿ ಹಳ್ಳದ ಹತ್ತಿರ ಯಮನಪ್ಪ ಸಿದ್ದಪ್ಪ ಚಲವಾದಿ ಇವರ ಜಮೀನು ಇರುವ ಕುರಿತು 9.50 ರಿಂದ 10.20 ರವರೆಗೆ ಸ್ಥಳ ಪಂಚನಾಮೆ ಜರುಗಿಸಿ ಅಲ್ಲಿಂದ ಅವರನ್ನು ಕರೆದುಕೊಂಡು ತನ್ನ ಮನೆಗೆ ಬಂದು ಆರೋಪಿತರೆಲ್ಲರೂ ಸೇರಿ ಒಳಸಂಚು ಮಾಡಿದ್ದು ಇದೇ ಮನೆಯಲ್ಲಿ ಅಲ್ಲಿ 10.45 ರಿಂದ 11.15 ಗಂಟೆವರೆಗೆ ಪಂಚನಾಮೆ ಜರುಗಿಸಿ ನಂತರ ಅವರನ್ನು ಕರೆದುಕೊಂಡು ಬೆಳಗಾವಿ-ರಾಯಚೂರ ರಸ್ತೆಯ ಪಕ್ಕದಲ್ಲಿ ನೀಲ್ಲಿಸಿದ ಬೈಕ ತೋರಿಸಿದ್ದು ಅದು ಸಿಲ್ವರ ಬಣ್ಣದ ಹೆಚ್.ಎಫ್ ಡಿಲಕ್ಸ ಇದ್ದು ಅದನ್ನು ನಮ್ಮ ಸಮಕ್ಷಮ 11.30 ರಿಂದ 12.00 ಗಂಟೆ ಅವಧಿಯಲ್ಲಿ

ಅಮಾನತುಪಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಆ ಕುರಿತು ನಿಪಿ-9 ರಿಂದ 11 ಪೋಟೋ ತೆಗೆದಿದ್ದಾರೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

26-12-2025

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.

S.C. 53/2024.

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

## ಸತ್ರ ಮೊಕದ್ದಮೆ ಸಂಖ್ಯೆ: 53/2024.

| | | | |
|---|---|---|---|
| ಹೆಸರು | : | ಜಗದೀಶ ಮುಧೋಳ | ಫ್ರಾಸಾ-03 |
| ತಂದೆಯ ಹೆಸರು | : | ಹಣಮಪ್ಪ | ಚಾಸಾ-03 |
| ವಯಸ್ಸು | : | 35 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಮುದಗಲ್ | |

ದಿನಾಂಕಃ 26-12-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಚಾಸಾ-1,2 ಪರಿಚಯ. ಈಗ ನಿಪಿ-4 ನೋಡುತ್ತಿದ್ದು ಅದರ ಮೇಲಿನ ಸಹಿ ನನ್ನದೇ ಇದ್ದು ಅದನ್ನು ನಿಪಿ-4(ಬಿ) ಅಂತಾ ಗುರುತಿಸಲಾಯಿತು. ದಿನಾಂಕಃ 29.04.2025 ರಂದು ಕಡಿ ರಸ್ತೆಯಲ್ಲಿ ಸಹಿ ಮಾಡಿದ್ದೇನೆ. ಬಸವರಾಜನ ಬಾಡಿ ನೋಡಲು ನಮ್ಮೂರಿನ ಹಳ್ಳಕ್ಕೆ ಹೋಗಿದ್ದೆವು. ಅಲ್ಲಿ ಪಿ.ಎಸ್.ಐ ಬಂದಿದ್ದರು. ಪಿ.ಎಸ್.ಐ ನಮ್ಮ ಮುಂದೆ ಪಂಚನಾಮೆ ಮಾಡಿದ್ದಾರೆ. ನಾನು ಮತ್ತು ಚಾಸಾ-2 ಪಂಚನಾಮೆಗೆ ಸಹಿ ಮಾಡಿದ್ದೇವೆ. ನಿಪಿ-1,2 ಪೋಟೋ ನೋಡಿ ಗುರುತಿಸಿದ್ದೇನೆ.

ಅದೇ ದಿನ ಪೊಲೀಸ ಠಾಣೆಯಲ್ಲಿ ನಿಪಿ-5 ಕ್ಕೆ ಸಹಿ ಮಾಡಿದ್ದು ಅದನ್ನು ನಿಪಿ-5(ಬಿ) ಅಂತಾ ಗುರುತಿಸಲಾಯಿತು. ಪಂಚನಾಮೆಯನ್ನು ಯಾರು ಮಾಡಿದ್ದರು ಅದರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ದಿನಾಂಕಃ 30.04.2024 ರಂದು ಕರಡಿ-ಬಂದವಾಡಗಿ ರಸ್ತೆಯಲ್ಲಿ ಬಸವರಾಜನ ಶವ ಇದ್ದು ಅಲ್ಲಿ ಪೊಲೀಸರು ಮಧ್ಯಾಹ್ನ 12.00 ರಿಂದ 1.00 ಗಂಟೆವರೆಗೆ ಶವ ಪಂಚನಾಮೆ ಜರುಗಿಸಿ ಓದಿ ಹೇಳಿ ನನ್ನ ಸಹಿ ಪಡೆದಿದ್ದಾರೆ ಎನ್ನುವುದು ನಿಜ.

ಅದೇ ದಿನಾ ಮಧ್ಯಾಹ್ನ 1.30 ರಿಂದ 2.00 ಗಂಟೆವರೆಗೆ ಪೊಲೀಸರು ಕರಡಿ-ನಂದದವಾಡಗಿ ಬಂಡಿ ರಸ್ತೆಯಲ್ಲಿ ಹಳ್ಳದ ಹತ್ತಿರ ಬಸವರಾಜ ಚಲವಾದಿ ಇವರ ಜಮಿನಿನ ಹತ್ತಿರ ಪೊಲೀಸರು ಚಾಸಾ-11 ತೋರಿಸಿದ ಸ್ಥಳದಲ್ಲಿ ನನ್ನ ಹಾಗೂ ಚಾಸಾ-2 ರ ಸಮಕ್ಷಮ ಸ್ಥಳ ಪಂಚನಾಮೆ ಬರೆದು ಸ್ಥಳದಲ್ಲಿದ್ದ ಮುಮಾ-1 ರಿಂದ 14 ಅಮಾನತುಪಡಿಸಿಕೊಂಡಿದ್ದಾರೆ ಎನ್ನುವುದು ನಿಜ. ಸ್ಥಳದಲ್ಲಿ ನಿಪಿ-1,2 ರಂತೆ ಪೋಟೋ ತೆಗೆದಿದ್ದಾರೆ ಎನ್ನುವುದು ಸರಿಯಲ್ಲ.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಆರ್.ಕೆ ವಕೀಲರಿಂದ.**

ಬೆಳಗ್ಗೆ 10.30 ಗಂಟೆಗೆ ನಾನು ಸ್ಥಳಕ್ಕೆ ಹೋಗಿದ್ದು ಪೊಸ್ಟಮಾರ್ಟಂ ಮಾಡುವವರೆಗೆ ಇದ್ದೆ. ಪಿ.ಎಂ ನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿದ್ದಾರೆ. ಪಂಚನಾಮೆಗಳಲ್ಲಿ ಬರೆದ ವಿಷಯ ನನಗೆ ಓದಿ ಹೇಳಿಲ್ಲ. ಪಂಚನಾಮೆಗಳಿಗೆ ಠಾಣೆಯಲ್ಲಿ ಸಹಿ ಪಡೆದಿದ್ದಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಪೊಲೀಸರ ಒತ್ತಡದ ಮೇರೆಗೆ ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ದಿನಾಂಕಃ 30.04.2024 ರಂದು ಕರಡಿ-ಬಂದವಾಡಗಿ ರಸ್ತೆಯಲ್ಲಿ ಬಸವರಾಜನ ಶವ ಇದ್ದು ಅಲ್ಲಿ ಪೊಲೀಸರು ಶವ ಪಂಚನಾಮೆ ಜರುಗಿಸಿ ಪೋಟೋ ತೆಗೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-4 ರಂತೆ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎನ್ನುವುದು ಸರಿಯಲ್ಲ.

ಕರಡಿ-ನಂದವಾಡಗಿ ಬಂಡಿ ರಸ್ತೆಯಲ್ಲಿ ಹಳ್ಳದ ಹತ್ತಿರ ಶವ ಬಿದ್ದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮಲ್ಲಪ್ಪ ವಗ್ಗರ ಘಟನಾ ಸ್ಥಳ ತೋರಿಸಿದ ಅಲ್ಲಿ ಪೊಲೀಸರು ಮುಮಾ-1 ರಿಂದ 14 ಅಮಾನತುಪಡಿಸಿಕೊಂಡಿದ್ದಾರೆ

ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಅಲ್ಲಿಗೆ ಹೋಗಿಲ್ಲ ಯಾವುದೇ ಪಂಚನಾಮೆಗಳನ್ನು ಜರುಗಿಸಿಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

26-12-2025
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.